

# ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಬಾಲಕಿಯರ ಪದವಿ ಪೂರ್ವ ಕಾಲೇಜು

**ಮಸ್ತೇನಹಳ್ಳಿ, ಕೈವಾರ ಹೋಬಳಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.**

| | |
|---|---|
| **ಪ್ರಾರಂಭವಾದ ವರ್ಷ ಮತ್ತು ದಿನಾಂಕ** | 2016<br>02/01/2016 |
| **ಸರ್ಕಾರಿಆದೇಶ ಸಂಖ್ಯೆ:** | ಎಮ್‌ಡಬ್ಲ್ಯೂ ಡಿ 193<br>ಎಮ್‌ಡಿಎಸ್2015 |
| **ನಿವೇಶನದ ವಿಸ್ತೀರ್ಣ** | 9.5 ಎಕರೆ ವಿಸ್ತೀರ್ಣದಲ್ಲಿ<br>ಸ್ವಂತ ಕಟ್ಟಡ |
| **ಅಕ್ಷಾಂಶ&ರೇಖಾಂಶ** | $13^{0}20'03''N-77^{0}57'55''E$ |
| **ಪ್ರವೇಶ ಮಂಜೂರಾತಿ ಸಂಖ್ಯೆ** | 200 |
| **ಪ್ರಸ್ತುತಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ:** | 113 |
| **ಪ್ರಸ್ತುತ ಬೋದಿಸಲ್ಪಡುವ ತರಗತಿಗಳು:** | ಪ್ರಥಮ ಪಿಯುಸಿ ಯಿಂದ ದ್ವಿತೀಯ ಪಿಯುಸಿ ಯ ವರಗೆ |
| **ಬೋದನಾ ಮಾಧ್ಯಮ:** | ಆಂಗ್ಲ ಮಾಧ್ಯಮ |











**: ವಿವರಣೆ :**

ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಬಾಲಕಿಯರ ಪದವಿ ಪೂರ್ವ ಕಾಲೇಜು ಮಸ್ತೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆಯ, ಚಿಂತಾಮಣಿ ತಾಲ್ಲೂಕಿನ ಪುಣ್ಯ ಸ್ಥಳವಾದ ಕೈವಾರದಿಂದ 3 ಕಿ.ಮೀ ದೂರದಲ್ಲಿದ್ದು, 2016–17 ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭವಾಗಿರುತ್ತದೆ. ಈ ಸದರಿ ಕಾಲೇಜು ಸುಮಾರು 9.5 ಎಕರೆ ವಿಶಾಲವಾದ ಪ್ರದೇಶದಲ್ಲಿದ್ದು, ಆಕರ್ಷಕವಾದ ವಾತಾವರಣದಿಂದ ಕೂಡಿರುತ್ತದೆ.

ಈ ಕಾಲೇಜು ಸ್ವಚ್ಛತೆಯಿಂದ, ಒಳ್ಳೆಯ ಆಡಳಿತ, ಶೈಕ್ಷಣಿಕ ಗುಣಮಟ್ಟದಿಂದ ಕೂಡಿದ್ದು, ವಿಶಾಲವಾದ ತರಗತಿ ಕೊಠಡಿಗಳು, ಪ್ರಾರ್ಥನಾ ಮಂದಿರ, ಗಣಕಯಂತ್ರ, ವಿಜ್ಞಾನ ಪ್ರಯೋಗಾಲಯಗಳು, ವಿಶಾಲವಾದ ಕ್ರೀಡಾಂಗಣವನ್ನು ಹೊಂದಿರುತ್ತದೆ. ಬೋಧಕ ಮತ್ತು ಬೋಧಕೇತರ ವರ್ಗದವರು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಕಾಲೇಜಿನ ಫಲಿತಾಂಶವನ್ನು ಉತ್ತಮ ಗೊಳಿಸಲು ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನಾ ಮತ್ತು ಪರಿಹಾರ ಬೋಧನೆಗಳನ್ನು ಮಾಡುತ್ತಾರೆ. ಈ ಕಾಲೇಜು 2019–20ನೇ ಶೈಕ್ಷಣಿಕ ಸಾಲಿನಲ್ಲಿ ವಿಜ್ಞಾನ ವಿಭಾಗದಲ್ಲಿ ಶೇ.100 ರಷ್ಟು ಫಲಿತಾಂಶವನ್ನು ಪಡೆದು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಉತ್ತಮ ಹೆಸರನ್ನು ಗಳಿಸಿರುತ್ತದೆ. ನಮ್ಮ ಕಾಲೇಜು ಕ್ರೀಡೆಯಲ್ಲಿ ತಾಲ್ಲೂಕು ಮಟ್ಟದ ಪ್ರತಿಭೆಗಳನ್ನು ಹೊರತಂದಿದ್ದು, ಎಲ್ಲ ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಸಂಪನ್ಮೂಲ ವ್ಯಕ್ತಿಗಳಿಂದ ಕಾರ್ಯಾಗಾರವನ್ನು ನಡೆಸಲಾಗುತ್ತಿದೆ. ಬಹುತೇಕ ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಗಳಲ್ಲಿ ಉತ್ತೀರ್ಣರಾಗಿ ಎಂಜಿನಿಯರಿಂಗ್, ನರ್ಸಿಂಗ್, ಬಿ.ಕಾಂ, ಬಿ.ಬಿ.ಎಮ್, ಇನ್ನೂ ಮುಂತಾದ ಉನ್ನತ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ಕಾಲೇಜಿನ ಘನತೆಯನ್ನು ಹೆಚ್ಚಿಸುತ್ತಿದ್ದಾರೆ. ಮೂಲಭೂತ ಸೌಕರ್ಯಗಳಾದ ಕ್ರೀಡಾ ಸಾಮಾಗ್ರಿಗಳನ್ನು, ಸೋಪ್‌ಕಿಟ್, ಬೆಡ್, ಬೆಡ್‌ಶಿಟ್, ಫಿಲ್ಲೋ 2ಟಯರ್ ಕಾಟ್‌ಗಳ ವ್ಯವಸ್ಥೆಯನ್ನು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಬಾಲಕಿಯರ ಪದವಿ ಪೂರ್ವ ಕಾಲೇಜು ನೀಡಲಾಗುತ್ತಿದೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ಣುಡಿಯಂತೆ ಹೆಣ್ಣು ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ನಮ್ಮ ಕಾಲೇಜು ಸದಾ ಕಾರ್ಯನಿರ್ವಹಿಸುತ್ತದೆ.